ಇ) ಸದರಿ ಜನಾಂಗವನ್ನು ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯುಡಿ 150 ಬಿಸಿಎ 94 ದಿನಾಂಕ 17-09-94ರ ಅನ್ವಯ ಪ್ರವರ್ಗ- 1ಕ್ಕೆ ಸೇರಿದ್ದು, ಪ್ರವರ್ಗ- 1ರ ಜಾತಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳಾದ ಬೆಳ್ಳಿ ಬೆಳಕು, ಶುಲ್ಕ ವಿನಾಯಿತಿ ಹೆಚ್ಚುವರಿ ಭೋಜನ ವೆಚ್ಚ ವಿದ್ಯಾರ್ಥಿ ವೇತನ ಮತ್ತು ಮಾಂಗಲ್ಯಭಾಗ್ಯ ಯೋಜನೆಯ ಸೌಲಭ್ಯವನ್ನು ನೀಡಲಾಗುತ್ತಿದೆ.

ಈ) 'ಕುಡುಬಿ' ಜನಾಂಗದವರಿಂದ ಮನವಿ ಬಂದಿದೆ. ಇದು ರಾಜ್ಯ ಮಟ್ಟದ ಪರ್ಯಾಯ ಜಾತಿ ಸಮಿತಿಯ ಮುಂದೆ ಪರಿಶೀಲನೆಯಲ್ಲಿದೆ.

ಉ) ಪ್ರಶ್ನೆ 'ಇ' ರಲ್ಲಿ ನೀಡಲಾದ ಉತ್ತರ ಅನ್ವಯಿಸುವುದು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕಛೇರಿಯನ್ನು ಸ್ಥಳಾಂತರಿಸಿರುವುದು

316(98) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿರುವ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಆಡಳಿತ ಕಛೇರಿಯನ್ನು ಬೆಂಗಳೂರಿನಿಂದ ಯಾವಾಗ ಸ್ಥಳಾಂತರಿಸಲಾಯಿತು?

ಆ) ಈ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯನ್ನು ಬೆಂಗಳೂರಿನಲ್ಲಿಯೇ ಉಳಿಸಿಕೊಂಡಿರಲು ಕಾರಣಗಳೇನು?

ಇ) ಹಾಗಿದ್ದಲ್ಲಿ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾಯಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಹಾದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ನವೆಂಬರ್ 1996ರಲ್ಲಿ ಸ್ಥಳಾಂತರಿಸಲಾಯಿತು

ಆ) ಆಡಳಿತ ಕಛೇರಿಯನ್ನು ಸ್ಥಳಾಂತರಿಸಿದಾಗ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯನ್ನೂ ಸಹ ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸಲಾಗಿದ್ದು, ಇವರ ಕಛೇರಿಯು ಹುಬ್ಬಳ್ಳಿಯಲ್ಲಿಯೇ ಕಾರ್ಯ ನಿರ್ವಹಿಸುತ್ತಿದೆ.

ಇ) ಅನ್ವಯಿಸವುದಿಲ್ಲ.

ಆಲೂರು ಪಟ್ಟಣ ಪಂಚಾಯತಿಗೆ ಸಿಬ್ಬಂದಿ ಕೊರತೆ

317 (109) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲೂರು ಪಟ್ಟಣ ಪಂಚಾಯತಿಗೆ ಮಂಜೂರಾದ ಹುದ್ದೆಗಳು ಎಷ್ಟು? ವರ್ಗವಾರು ವಿವರ ನೀಡುವುದು;

ಆ) ಇವುಗಳಲ್ಲಿ ನೇಮಕ ಹೊಂದಿ ಖಾಲಿ ಇರುವ ಹುದ್ದೆಗಳು ಯಾವುವು; ಎಷ್ಟು ವರ್ಷದಿಂದ ಬಾಲಿಯಾಗಿ ಉಳಿದಿವೆ?

ಇ) ಈ ಖಾಲಿ ಹುದ್ದೆಗಳನ್ನು ತುಂಬುವ ಉದ್ದೇಶ ಸರ್ಕಾರಕ್ಕಿದೆಯೆ; ಹಾಗಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿಯೇ ಭರ್ತಿಮಾಡಲಾಗುವುದೇ ತಿಳಿಸುವುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) 1. ಮುಖ್ಯಾಧಿಕಾರಿ ಶ್ರೇಣಿ-2 1

2. ಹೆಡ್ ಕ್ಲರ್ಕ್ (ಪ್ರ ದ ಸ) 1

3. ದ್ವಿತೀಯ ದರ್ಜೆ ಸಹಾಯಕ 3

4. ತೆರಿಗೆ ನಿರೀಕ್ಷಕರು ಶ್ರೇಣಿ 2

5. ಕರ ವಸೂಲಿಗಾರರು (ಕಟ್ಟಡ ತೆರಿಗೆ ಮತ್ತು ನೀರಿನ ಕಂದಾಯ ಮಿಸ್‌ಲೀನಿಯಸ್ ಇತ್ಯಾದಿಗಳಿಗಾಗಿ) 2

6. ಆರೋಗ್ಯ ನಿರೀಕ್ಷಕರು 1

7. ಕನ್ಸರ್‌ವೆನ್ಸಿ ಧಪೇಧಾರ್ 1

8. ಪೌರ ಕಾರ್ಮಿಕರು 9

9. ಕಛೇರಿ ಜವಾಜರು 2

ಆ) 1. ಪ್ರಥಮ ದರ್ಜೆ ಸಹಾಯಕರು 1 (5 ವರ್ಷಗಳಿಂದ)

2. ದ್ವಿತೀಯ ದರ್ಜೆ ಸಹಾಯಕರು 1 (5 ವರ್ಷಗಳಿಂದ)

3. ತೆರಿಗೆ ನೀರೀಕ್ಷಕರ ಶ್ರೇಣಿ-2 1 (5 ವರ್ಷಗಳಿಂದ)

4. ಕರ ವಸೂಲಿಗಾರರು (ನೀರಿನ ತೆರಿಗೆ, ಬಾಡಿಗೆ ಮಿಸಲೀನಿಯಸ್) 1 (5 ವರ್ಷಗಳಿಂದ)

5. ಆರೋಗ್ಯ ನಿರೀಕ್ಷಕರು 1 (5 ವರ್ಷಗಳಿಂದ)

6. ಕನ್ಸರ್‌ವೆನ್ಸಿ ಧಪೇಧಾರ್ 1 (5 ವರ್ಷಗಳಿಂದ)

7. ಪೌರ ಕಾರ್ಮಿಕರು 5 (5 ವರ್ಷಗಳಿಂದ)

ಇ) ಪ್ರಸ್ತುತ ಖಾಲಿ ಇರುವ ಹುದ್ದೆಗಳಲ್ಲಿ ಶೇಶಡಾ 80 ರಷ್ಟು ಹುದ್ದೆಗಳನ್ನು ರದ್ದುಗೊಳಿಸಬೇಕೆಂಬುದು ಸರ್ಕಾರದ ತೀರ್ಮಾನವಾಗಿದೆ. ಹೀಗಿದ್ದರೂ ನಗರ ಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ಹಾಲಿ ಇರುವ ಹುದ್ದೆಗಳಲ್ಲಿ ಅತ್ಯಗತ್ಯ ಹುದ್ದೆಗಳನ್ನು ಕನಿಷ್ಠ ಪ್ರಮಾಣದಲ್ಲಿ ಭರ್ತಿ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.